6. ಶಾಸನ ರಚನೆ

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕ, 2006

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಡಿ.ಎಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಅಧ್ಯಕ್ಷರೇ, "2006ರ ಕರ್ನಾಟಕ ವೃತ್ತಿಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ".

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಸರ್ಕಾರ ಆ ಬಿಲ್ ಮಂಡಿಸುತ್ತಿರುವ ಉದ್ದೇಶ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಬೆನಿಫಿಟ್ ಮಾಡುವುದಕ್ಕಾಗಿ. ಅಂದರೆ ಬಿಲ್ ಮಂಡಿಸುವ ಉದ್ದೇಶ ನಿಷ್ಕಲ್ಮಶವಾಗಿಲ್ಲ. ಅದು ಖಾಸಗಿ ಶಿಕ್ಷಣ ಸಂಸ್ಥೆಗಳ ಪರವಾದ ಬಿಲ್ ಆಗಿರುವುದರಿಂದ ಅದನ್ನು ಇಲ್ಲಿ ಮಂಡಿಸುವುದನ್ನು ನಾನು ವಿರೋಧಿಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಈ ಬಿಲ್ ನೇರವಾಗಿ ಖಾಸಗಿ ಸಂಸ್ಥೆಗಳ ಪರವಾಗಿರುವುದು. ಆದರಲ್ಲೇನೂ ಬೇರೆ ಮಾತು ಇಲ್ಲವೇ ಇಲ್ಲ. ಇದಕ್ಕೆ ನಮ್ಮದೂ ಸ್ಪಷ್ಟ ವಿರೋಧ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವೂ ಅನೇಕ ಸಲ ತಮಗೆ ಹೇಳಿದ್ದೇವೆ, ಇದರ ಅಗತ್ಯ ಇಲ್ಲ. ಮಂಡಿಸಬೇಕಾ ಬೇಡವಾ ಅಂತ ಯೋಚನೆ ಮಾಡಿ ಅಂತ. ಈ ಬಿಲ್‌ನಿಂದ ರಾಜ್ಯದ ಮಕ್ಕಳಿಗೆ ಬಹಳ ಅನುಕೂಲವಾಗುತ್ತದೆ ಅಂತ ಏನು ವ್ಯಾಖ್ಯಾನ ನಡೆದಿದೆ ಅದಕ್ಕಿಂತ ಹೆಚ್ಚಾಗಿ ಮ್ಯಾನೇಜ್‌ಮೆಂಟ್‌ನವರಿಗೆ ಸಹಾಯ ಮಾಡುವುದಕ್ಕಾಗಿ ತಂದಿರುವ ಬಿಲ್ ಇದು, ಅಧ್ಯಕ್ಷರೇ. ಯೋಚನೆ ಮಾಡಿ, ಇದನ್ನು ಮಂಡಿಸುವುದಕ್ಕೇ ನಾವೆಲ್ಲಾ ವಿರೋಧ ಮಾಡುತ್ತಿದ್ದೇವೆ.

ಶ್ರೀ ಎಸ್. ರಾಜೇಂದ್ರನ್ : ಅಧ್ಯಕ್ಷರೇ, ನಾವು ಅವತ್ತೇ ಚರ್ಚೆಯಲ್ಲಿ ಹೇಳಿದೆವು, ತಮಿಳುನಾಡು ವಿದ್ಯಾರ್ಥಿಗಳಿಗೆ ಸುಪ್ರೀಂಕೋರ್ಟ್ ಆರ್ಡರ್ ಕೊಟ್ಟಿದ್ದರಿಂದ ಅವರಿಗೆಲ್ಲಾ ಒಳ್ಳೆಯದಾಗಿದೆ. ಅಂತಹ ಬಿಲ್ ತಂದರೆ ನಾವು ಸಪೋರ್ಟ್ ಮಾಡುತ್ತೇವೆ. ಮ್ಯಾನೇಜ್‌ಮೆಂಟ್ ಫೇವರ್ ಆಗಿ ನೀವು ಬಿಲ್ ತಂದರೆ ಅದಕ್ಕೆ ನಾವು ವಿರೋಧವಾಗಿರುತ್ತೇವೆ.

ಶ್ರೀ ಎನ್. ದರಂಸಿಂಗ್ : ಅಧ್ಯಕ್ಷರೇ, ಮೊದಲೇ ಶಂಕರಮೂರ್ತಿಯವರು ಇದನ್ನು ಪ್ರಸ್ತಾಪಿಸಿದ್ದರು. ಆಗಲೇ ವಾಟಾಳ್ ನಾಗರಾಜ್, ಶ್ರೀರಾಮರೆಡ್ಡಿ ರಾಜೇಂದ್ರನ್, ನಾವೂ ಹೇಳಿದ್ದೆವು, ಇದು ಮ್ಯಾನೇಜ್‌ಮೆಂಟ್ ಪರ ಅಂತ. ಎಷ್ಟೋ ಸಲ ಈ ಮಸೂದೆಗೆ ಮಾತನಾಡುವ ಕಾಲದಲ್ಲಿ ನಾವೆಲ್ಲರೂ ಹೇಳಿದ್ದೇವೆ. ಮ್ಯಾನೇಜ್‌ಮೆಂಟ್ ಜತೆ ಮಾತನಾಡಿರಿ. ಆದರೆ ತಾವು ಕೇಳಲಿಲ್ಲ. ಕೊನೆಗೆ ಐದು ತಿಂಗಳ ನಂತರ ಇವತ್ತು ಮ್ಯಾನೇಜ್‌ಮೆಂಟ್ ಜತೆಯಲ್ಲಿ ಮಾತನಾಡಿ ಬಿಲ್ ಏನು ತರುತ್ತಿದ್ದೀರಿ, ಅದಕ್ಕೆ ನಮ್ಮ ಸಮ್ಮತಿ ಇಲ್ಲ. ಅದನ್ನು ನಾವು ಪೂರ್ಣ ವಿರೋಧ ಮಾಡುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮ್ಯಾನೇಜ್‌ಮೆಂಟ್ ಜತೆ ಅಂಡರ್‌ಸ್ಟಾಂಡಿಂಗ್ ಮಾಡಿಕೊಂಡಿದ್ದೇವೆ ಅಂತ ಬಿಲ್ ಮಂಡಿಸುತ್ತಿದ್ದೀರಾ?

(ಶ್ರೀ ವಾಟಾಳ್ ನಾಗರಾಜ್, ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಜಿ.ವಿ. ಶ್ರೀರಾಮರೆಡ್ಡಿ, ಶ್ರೀ ಎಸ್. ರಾಜೇಂದ್ರನ್, ಶ್ರೀ ಕೆ. ಜಯಪ್ರಕಾಶ್ ಹೆಗಡೆಯವರುಗಳು ಸಭಾತ್ಯಾಗ ಮಾಡುವರು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2006ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಮಂಡಿಸಲು ಅನುಮತಿ ನೀಡಿತು". ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಅನುಮತಿ ನೀಡಲಾಯಿತು

ಈಗ ಮಾನ್ಯ ಸಚಿವರು ವಿಧೇಯಕವನ್ನು ಮಂಡಿಸಬೇಕು.

7. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು : ಈಗ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 899 ಮತ್ತು 902 ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಮತ್ತು ಶ್ರೀ ಮಲ್ಲಿಕಾರ್ಜುನ ಎಸ್. ಖೂಬಾ ರವರ ಎರಡೂ ಪ್ರಶ್ನೆ ಗಳನ್ನು ಒಟ್ಟಿಗೆ ಸೇರಿಸಿ ತೆಗೆದುಕೊಳ್ಳಲಾಗಿದೆ.

165 (899) ಮತ್ತು (902) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮತ್ತು ಶ್ರೀ ಮಲ್ಲಿಕಾರ್ಜುನ ಎಸ್. ಖೂಬಾ (ಬಸವಕಲ್ಯಾಣ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಹೊಸ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಗುವುದು;

ಆ) ಇದಕ್ಕಾಗಿ ಸರ್ಕಾರ ಈ ಸಾಲಿನ ಬಜೆಟ್‌ನಲ್ಲಿ ಎಷ್ಟು ಹಣವನ್ನು ಒದಗಿಸಲಾಗಿದೆ;

ಇ) ಬೀದರ್‌ನಲ್ಲಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ; ಕಟ್ಟಡ ನಿರ್ಮಾಣ ಹಾಗೂ ಇತರ ಯಾವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ; ಬೀದರ್‌ನಲ್ಲಿ ಪ್ರಸಕ್ತ ಸಾಲಿನಲ್ಲಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲಾಗುವುದೇ?

ಡಾ॥ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಬೆಳಗಾಂ, ಮಂಡ್ಯ, ಹಾಸನ, ಶಿವಮೊಗ್ಗ, ರಾಯಚೂರು ಮತ್ತು ಬೀದರ್‌ನಲ್ಲಿ ತಲಾ ಒಂದು ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲು ಮಂಜೂರಾತಿ ನೀಡಿದ್ದು, ಭಾರತೀಯ ವೈದ್ಯಕೀಯ ಪರಿಷತ್ತು ಮತ್ತು ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ಮಾಡಲಾಗುತ್ತಿದೆ.

ಆ) ರೂ. 39.33 ಕೋಟಿ

ಇ) ಬೀದರ್ ವೈದ್ಯಕೀಯ ಕಾಲೇಜಿನ ಕಟ್ಟಡದ ಕೆಲಸ ಹಾಗೂ ಇತರೆ ಚಟುವಟಿಕೆಗಳು ಪ್ರಗತಿಯಲ್ಲಿದೆ. ಬೋಧಕ ಸಿಬ್ಬಂದಿ ನೇಮಕಾತಿ ಲಭ್ಯತೆಯ ಆಧಾರದ ಮೇಲೆ ಮಾಡಲಾಗಿದೆ. ಉಳಿದ ಸಿಬ್ಬಂದಿಯ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಪೀಠೋಪಕರಣಗಳನ್ನು ಖರೀದಿಸಲು ಕಾರ್ಯಾದೇಶ ನೀಡಲಾಗಿದೆ. ಭಾರತೀಯ ವೈದ್ಯಕೀಯ ಪರಿಷತ್ತು ಮತ್ತು ಕೇಂದ್ರ ಸರ್ಕಾರದೊಂದಿಗೆ ಈ ಬಗ್ಗೆ ಸಮಾಲೋಚನೆ ಮಾಡಲಾಗುತ್ತಿದೆ.